ಸಾಕ್ಷಿಯನ್ನು ದಿಃ **04-07-2025** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.
ಪಾಟೀ ಸವಾಲು ಪ್ರತಿವಾದಿ ನಂ. 12 ಮತ್ತು 13 ನೇ ಪರ ಶ್ರೀ ಎಸ್ ಎ ಎಸ್ ವಕೀಲರಿಂದ

1) ನನಗೆ ವಾದಿಯವರ ಪರಿಚಯ ಇರುತ್ತದೆ. ಸರ್ವೇ ನಂ. 617/1 ದಾವಾ ಅ ಆಸ್ತಿಯನ್ನು ಪ್ರತಿವಾದಿ ನಂ.12 ಮತ್ತು 13 ರವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಪ್ರತಿವಾದಿ ನಂ. 12 ಮತ್ತು 13 ರವರು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 1 ನೇ ವಾದಿಯವರು ಸದರಿ ಜಮೀನನ್ನು ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂದು ಹೇಳುತ್ತಾರೆ. ಸರ್ವೇ ನಂ. 617/1 ದಾವಾ ಅ ಆಸ್ತಿಯನ್ನು ಪ್ರತಿವಾದಿ ನಂ.12 ಮತ್ತು 13 ರವರು ಖರೀದಿ ಮಾಡಿರುತ್ತಾರೆ ಹಾಗೂ ಅವಾಗಿಂದಲೂ ಸಾಗುವಳಿ ಮಾಡುತ್ತಾ ಬಂದಿರುತ್ತಾರೆ ಎಂಬುವ ವಿಷಯ ಗೊತ್ತಿದ್ದರು ಸಹ ವಾದಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ. 617/1 ದಾವಾ ಅ ಆಸ್ತಿಯನ್ನು ಪ್ರತಿವಾದಿ ನಂ.12 ಮತ್ತು 13 ರವರು ಖರೀದಿ ಮಾಡಿರುವುರಿಂದ ವಾದಿಯವರಿಗೆ ಸದರಿ ಆಸ್ತಿಯ ಹಕ್ಕು ಹಾಗೂ ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ವಾದಿಯವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟಿ ಸವಾಲು ಪ್ರತಿವಾದಿ ನಂ **1** ರಿಂದ **5** ರವರ ಶ್ರೀ ಜಿ ಸಿ ಆರ್ ರವರ ಪ್ರಾಸಾ **1** ರವರ ಮಾಡಿದ್ದು ಅದನ್ನು ಅಳವಡಿಸಿಕೊಳ್ಳುತ್ತಾರೆ.

ಪ್ರತಿವಾದಿ ನಂ. **6** ರಿಂದ **11** ಇವರು ಎಕಪಕ್ಷೀಯ ಇರುವುದರಿಂದ ಅವರ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.
ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೆ ಸರಿ ಇದೆ

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ**
**ಜೆ.ಎಮ್.ಎಫ್.ಸಿ ಗದಗ**